# ಕರ್ನಾಟಕವಿಧಾನಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 711 |
| **ಮಾನ್ಯ ಸದಸ್ಯರ ಹೆಸರು** | ಶ್ರೀಮತಿ ಬಲ್ಕೀಸ್ ಬಾನು (ವಿಧಾನ ಸಭಾ ಕ್ಷೇತ್ರ) |
| **ಉತ್ತರಿಸುವ ಸಚಿವರು** | ಉನ್ನತ ಶಿಕ್ಷಣ ಸಚಿವರು |
| **ಉತ್ತರಿಸಬೇಕಾದ ದಿನಾಂಕ** | 09.03.2026 |

| | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿರುವ ಕುವೆಂಪು ವಿಶ್ವವಿದ್ಯಾಲಯ ಹಾಗೂ ದಾವಣಗೆರೆ ವಿಶ್ವವಿದ್ಯಾಲಯದಲ್ಲಿ 10ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪ್ರವೇಶ ಪಡೆದಿರುವ ಸ್ನಾತಕೋತ್ತರ ವಿಭಾಗಗಳ ವಿವರ ನೀಡುವುದು; | ಕಳೆದ 3 ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿರುವ ಕುವೆಂಪು ವಿಶ್ವವಿದ್ಯಾಲಯದಲ್ಲಿ 10 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪ್ರವೇಶ ಪಡೆದಿರುವ ಸ್ನಾತಕೋತ್ತರ ವಿಭಾಗಗಳ ವಿವರವನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ.<br><br>ದಾವಣಗೆರೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿ 10 ಕ್ಕಿಂತ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳ ಪ್ರವೇಶಾತಿ ಇರುವುದಿಲ್ಲ. |
| ಆ) | ವಿಶ್ವವಿದ್ಯಾನಿಲಯದ ಆರ್ಥಿಕ ಹೊರೆ ತಗ್ಗಿಸುವ ನಿಟ್ಟಿನಲ್ಲಿ ಅಂತಹ ವಿಭಾಗಗಳನ್ನು ಸಮೀಕರಿಸಿ ಒಂದೇ ವಿಶ್ವವಿದ್ಯಾನಿಲಯದಲ್ಲಿ ಉಳಿಸಿಕೊಳ್ಳುವ ಸಂಬಂಧದದಲ್ಲಿ ಸರ್ಕಾರ ಅನುಸರಿಸುತ್ತಿರುವ ಕ್ರಮಗಳೇನು; | ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಕನಿಷ್ಟ ದಾಖಲಾತಿ ನಿಗದಿಪಡಿಸುವ ಕುರಿತಂತೆ ವಿಶ್ವವಿದ್ಯಾಲಯಗಳಿಂದ ಯಾವುದೇ ಪ್ರಸ್ತಾವನೆಗಳು ಸ್ವೀಕೃತವಾಗಿರುವುದಿಲ್ಲ.<br><br>ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಆರ್ಥಿಕ ಹೊರೆ ತಗ್ಗಿಸುವ ನಿಟ್ಟಿನಲ್ಲಿ ಅಂತಹ ವಿಭಾಗಗಳನ್ನು ಸಮೀಕರಿಸಿ ಒಂದೇ ವಿಶ್ವವಿದ್ಯಾಲಯದಲ್ಲಿ ಉಳಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಇ) | ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ ಅಗತ್ಯಕ್ಕಿಂತ ಹೆಚ್ಚಿರುವ ಉಪಕುಲಸಚಿವರ ಹುದ್ದೆಗಳನ್ನು ಸರ್ಕಾರ ಹಿಂದಕ್ಕೆ ಪಡೆದುಕೊಂಡು ಆ ಹುದ್ದೆಗಳನ್ನು ಅಗತ್ಯವಿರುವ ವಿಶ್ವವಿದ್ಯಾನಿಲಯಗಳಿಗೆ ವರ್ಗಾಯಿಸುವ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು | ಕುವೆಂಪು ವಿಶ್ವವಿದ್ಯಾಲಯಕ್ಕೆ ಪರಿನಿಯಮದ ಮೂಲಕ 05 ಉಪ ಕುಲಸಚಿವ ಹುದ್ದೆಗಳು ಮಾತ್ರ ಮಂಜೂರಾಗಿರುತ್ತವೆ. ಈ ಹುದ್ದೆಗಳು ವಿಶ್ವವಿದ್ಯಾಲಯದ ಶೈಕ್ಷಣಿಕ, ಸಂಶೋಧನೆ ಮತ್ತು ಆಡಳಿತಾತ್ಮಕ ಕಾರ್ಯಗಳನ್ನು ಸುಗಮವಾಗಿ ನಿರ್ವಹಣೆ ಮಾಡಲು ಕುವೆಂಪು ವಿಶ್ವವಿದ್ಯಾಲಯಕ್ಕೆ ಅತ್ಯಾವಶ್ಯಕವಾಗಿರುತ್ತವೆ.<br><br>ಮುಂದುವರೆದು, ಉಪ ಕುಲಸಚಿವ ಹುದ್ದೆಗಳನ್ನು ಬೇರೆ ವಿಶ್ವವಿದ್ಯಾಲಯಗಳಿಗೆ ವರ್ಗಾಯಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಈ) | ಸಾಕಷ್ಟು ಲೋಪದೋಷದಿಂದ ಕೂಡಿರುವ ಹಾಗೂ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗಿರುವ "ಡಿಜಿಟಲ್ ಮೌಲ್ಯಮಾಪನ" ಪದ್ಧತಿಯನ್ನು ರದ್ದುಪಡಿಸುವ ಸಂಬಂಧ ಸರ್ಕಾರದ ನಿಲುವೇನು? | ಕುವೆಂಪು ವಿಶ್ವವಿದ್ಯಾಲಯದಲ್ಲಿ "ಡಿಜಿಟಲ್ ಮೌಲ್ಯಮಾಪನ" ಪದ್ಧತಿಯನ್ನು ಅಳವಡಿಸಿಕೊಂಡ ನಂತರ ಡಾ.ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು, ಬೀದರ್ ವಿಶ್ವವಿದ್ಯಾಲಯ, ಬೀದರ್ ಹಾಗೂ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ ಈ ವಿಶ್ವವಿದ್ಯಾಲಯಗಳಲ್ಲಿ "ಡಿಜಿಟಲ್ ಮೌಲ್ಯಮಾಪನ" ಕಾರ್ಯವನ್ನು ಅಳವಡಿಸಿಕೊಳ್ಳಲಾಗಿದೆ. |

| | | |
|---|---|---|
| | | 2025-26ನೇ ಶೈಕ್ಷಣಿಕ ಸಾಲಿನಲ್ಲಿ "ಡಿಜಿಟಲ್ ಮೌಲ್ಯಮಾಪನ" ಪ್ರಗತಿಯಲ್ಲಿದ್ದು ಯಾವುದೇ ನ್ಯೂನ್ಯತೆಗಳು, ದೂರುಗಳು ಬಂದಿರುವುದಿಲ್ಲ. ಈ ಹಿನ್ನೆಲೆಯಲ್ಲಿ "ಡಿಜಿಟಲ್ ಮೌಲ್ಯಮಾಪನ" ಪದ್ಧತಿಯನ್ನು ರದ್ದುಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.<br><br>ದಾವಣಗೆರೆ ವಿಶ್ವವಿದ್ಯಾಲಯದಲ್ಲಿ "ಡಿಜಿಟಲ್ ಮೌಲ್ಯಮಾಪನ" ಪದ್ಧತಿಯನ್ನು ಅಳವಡಿಸಿಕೊಂಡಿರುವುದಿಲ್ಲ. |

**ಸಂಖ್ಯೆ**: ಇಡಿ 52 ಯುಎನ್ಇ 2026

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು

## ಅನುಬಂಧ -1

| ವಿಭಾಗಗಳು/ಘಟಕ/ ಕೇಂದ್ರ | ಪ್ರವೇಶ ಮಿತಿ | ಪ್ರವೇಶಾತಿ | | |
|---|---|---|---|---|
| | | 2023-24 | 2024-25 | 2025-26 |
| ಹಿಂದಿ | 46 | 05 | 07 | 06 |
| ಪತ್ರಿಕೋದ್ಯಮ & ಸಮೂಹ ಸಂವಹನ | 43 | 16 | 21 | 09 |
| ಇ.ಎಸ್.ಆರ್.ಎಂ (ಭೂ ವಿಜ್ಞಾನ) | 42 | 30 | 09 | 15 |
| ಎಂ.ಆರ್.ಎಸ್.ಎ (ಭೂ ವಿಜ್ಞಾನ) | 42 | 12 | 06 | 10 |
| ಎಲೆಕ್ಟ್ರಾನಿಕ್ಸ್ | 42 | 14 | 21 | 07 |
| ಸಹ್ಯಾದ್ರಿ ಕಾಲೇಜು ಆವರಣ, ಶಿವಮೊಗ್ಗ | | | | |
| ಸಂಸ್ಕೃತ | 48 | 17 | 12 | 10 |
| ಉರ್ದು | 48 | 16 | 18 | 09 |
| ಸಹ್ಯಾದ್ರಿ ವಿಜ್ಞಾನ (ಘಟಕ) ಕಾಲೇಜು, ಶಿವಮೊಗ್ಗ | | | | |
| ಔದ್ಯೋಗಿಕ ರಸಾಯನಶಾಸ್ತ್ರ | 42 | 42 | 26 | 08 |
| ಸ್ನಾತಕೋತ್ತರ ಕೇಂದ್ರ, ಕಡೂರು | | | | |
| ಔಷಧೀಯ ರಸಾಯನಶಾಸ್ತ್ರ | 42 | 30 | 07 | 07 |
| ವಾಣಿಜ್ಯಶಾಸ್ತ್ರ | 54 | 20 | 14 | 08 |